

ಭಜನೆ ಪದ ಹಾಡುತ್ತ ಒಂದೊಂದೆ ತುತ್ತನ್ನು ಬಾಯಿಯಲ್ಲಿಟ್ಟುಕೊಳ್ಳುತ್ತಿದ್ದ. ಪಾರ್ವತಿ ಎಲೆ ಅಡಿಕೆ ತಿನ್ನುತ್ತಾ ಕಟ್ಟೆಯ ಮೇಲೆ ಕುಳಿತು ತನ್ನ ಮನೆಯ ಮುಂದಿನ ಕತ್ತಲ ದಾರಿಯನ್ನು ದಿಟ್ಟಿಸುತ್ತ ಕುಳಿತಳು.

'ಏನ್ ಪಾರ್ವತಿ, ಯಾಕ ಸಪ್ಪಾಗಿದ್ದಿ, ಏನಾಯ್ತು?' ಅಂತ ವೆಂಕೋಬ ಬೀಡಿ ಸೇದುತ್ತಾ ಬಂದು ಕುಳಿತ. ಮೀಸೆ ತುದಿಯಲ್ಲಿ ಅನ್ನದ ಅಗುಳು ಹಾಗೇ ಇತ್ತು. ಡರ್‌ನೆ ಡೇಗುತ್ತಾ ಬೀಡಿಯ ಹೊಗೆಯನ್ನು ಉಗಿಬಂಡಿಯಂತೆ ಬಿಡುತ್ತಾ ಕುಳಿತ. ಪಾರ್ವತಿ ಸೀರೆ ಸೆರಗನ್ನು ಗಟ್ಟಿಯಾಗಿ ಕಿವಿವರೆಗೂ ಸುತ್ತಿಕೊಂಡು 'ಈ ಹಾಳಾದ ಬೀಡಿ ಸೇದಾದು ಯಾವಾಗ ಬಿಡ್ತಿ? ಎಂಥ ಕೆಟ್ಟ ವಾಸನೆ' ಅಂದಳು. ಕೊನೆಯ ಜುರಿ ಎಳೆದ ವೆಂಕೋಬ ಅದನ್ನು ಬಿಸಾಕಿ, ಬಕ್ಕಣದಲ್ಲಿದ್ದ ಅಡಿಕೆ ಚೀಟು ತೆಗೆದುಕೊಂಡು ಹಾಕಿಕೊಂಡ. ನಾಯಿಗಳು ಬೊಗಳುತ್ತಿದ್ದವು. ಹಚಾ ಅಂತ ಕಲ್ಲು ತಗೊಂಡು ನಾಯಿಗಳಿಗೆ ಬೀಸಿ ಮತ್ತೊಂದು ಬೀಡಿ ಹಚ್ಚಿದ. 'ನನ್ ಬೀಡಿ ಕತೆ ಬಿಡು, ಯಾಕ್ ಚಿಂತಿ ಮಾಡಕತಿದಿ, ಅದನ್ನು ಮೊದಲು ಹೇಳು' ಅಂದ. 'ಗಳಿಸಿ ಇಟ್ಟು ಹೋಗಿದ್ದಿಯಲ್ಲ ಆಸ್ತಿ. ಅದನ್ನು ಹೆಂಗ್ ಉಳಿಸಬೇಕು ಅಂತ ಚಿಂತಿ ಮಾಡಕತಿನಿ. ನಿನ್ನಂಥ ಹುಚ್ಚು ಪ್ಯಾಲಿ ಮನುಷ್ಯ ಎಲ್ಲಿ ಇಲ್ಲ ನೋಡು. ಮೊನ್ನೆ ಸಂತೆಯಲ್ಲಿ ಲಚುಮಣ್ಣ ಮಾಷ್ಟ್ರು ಸಿಕ್ಕಿದ್ರು. ಯಾವಾಗಲೂ ಅವರು ಹೆಂಗೆಂಗೋ ನೋಡ್ತಾರೆ. ಕೊಂಕು ಕೊಂಕು ಮಾತಾಡ್ತಾರೆ. ಇದೆಲ್ಲ ನಿನ್ನಿಂದ. ನೀ ಅದ್ಯಾವಳನ್ನೋ ಕಟಕಂಡು ಅಲ್ಲಿರ್ತಿದಿ, ಇಲ್ಲಿ ನಾವು ಅನುಭವಿಸಬೇಕು, ನಿನಗೆ ಮಾನ ಮರ್ಯಾದೆ ಅನ್ನದು ಇದ್ರೆ ಇನ್ನೊಮ್ಮೆ ಈ ಕಡೆ ಬರಬೇಡ' ಅಂತ ಪಾರ್ವತಿ ಹೇಳಿ ಕ್ಯಾಕರಿಸಿ ನೆಲಕ್ಕೆ ಉಗುಳಿ ಒಳಹೋದಳು. ವೆಂಕೋಬ ಕಡ್ಡಿಗೀರಿ ಬೀಡಿ ಹಚ್ಚಿಕೊಂಡು,

ಥಳಕು ಬಳುಕಿನ ಬಣ್ಣದಾಗ
ಹೊಳಪು ತುಂಬಿದ ಲೋಕದಾಗ
ಹಳ್ಯಾಗ ಕುಂತು ಹಳ್ಳದಾಗ ಅಳ್ತಾ ಕುಂತೆಲ್ಲೆ

ಅಂತ ಜನಪದ ಪದ ಹಾಡುತ್ತ ಕತ್ತಲ ದಾರಿಯಲ್ಲಿ ಮರೆಯಾದ. ಗಂಡ ಸತ್ತ ಲಚುಮವ್ವಳ ಜೊತೆ ವೆಂಕೋಬ ಸಂಬಂಧ ಇಟ್ಟುಕೊಂಡು ಬೇರೆ ಊರಲ್ಲಿ ವಾಸಿಸುತ್ತಿದ್ದ. ಪಾರ್ವತಿ ಒಂದು ಸಣ್ಣ ಕಿರಾಣಿ ಅಂಗಡಿ ಇಟ್ಟುಕೊಂಡು ಕೂಲಿ ನಾಲಿ ಮಾಡುತ್ತ ಬದುಕುತ್ತಿದ್ದಳು. ಮಗಳು ಗಂಡನ ಮನೆಗೆ ಹೋಗುವವರೆಗೂ ತನಗೆ ತಿಳಿದಾಗ ವಾರಕ್ಕೋ ಹದಿನೈದು ದಿನಕ್ಕೋ ಬಂದು ಚೂರು ಪಾರು ಹಣ ಕೊಟ್ಟು ಮತ್ತೆ ಲಚುಮವ್ವನ ಮನೆಗೆ ಹೊರಟುಬಿಡುತ್ತಿದ್ದ. ಇತ್ತೀಚೆಗೆಯಂತೂ ಬರದೆ